XVIII. ಕೆಳಗೆ ಕಾಣಿಸಿರುವ ಮೆಂಬರುಗಳು ಈ ಮಿಟಿಂಗಿಗೆ ಬರಲು ಅನಾನುಕೂಲವೆಂತ ಬರಸಿರೆವೆ ಬತ್ತು ಗಳನ್ನು ಓದಲಾಯಿತು.

1. ಮೆ॥ ಎಂ. ಕೆ. ತಿರುಮಲಾಚಾರ್ಯರು, ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರು.
2. ,, ಕೆ. ತಮ್ಮಯ್ಯನವರು.
3. ,, ಹಬೀಬುಲ್ಲಾ ಸಾಹೆಬರು.
4. ,, ಕೋನೇರಿ ರಾಮಚಟ್ಟರು.

ತೀರ್ಮಾನ.—ಕೇಳಿ ವಿಲೆ ಇಡಸಲಾಯಿತು.

XIX. ಈ ಡಿಸ್ಟ್ರಿಕ್ಟ್ ಬೋರ್ಡು ಮೆಂಬರಾಗಿದ್ದ ಮೆ॥ ಸುಂಡೇಕೆರೆ ಶ್ರೀಕಂಠೈಯ್ಯನವರು ಕ್ಷಾಲವಾಗಿರುತ್ತಾರೆಂತ ತಲ್ಪಿದ 2—12—06ರ ನಮ್ಮ ನಂ 1411ನೆ ನಂಬರ್ ರಿಪೋರ್ಟು ಮಂಜರಾಬಾದು ತಾಲ್ಲೂಕು ಅಮಲ್ದಾರ್ರ ರಿಪೋರ್ಟು ಪರಾಂ ಬರಿಸಲಾಯಿತು.

ತೀರ್ಮಾನ.—ಮೆ॥ ಶ್ರೀಕಂಠೈಯ್ಯನವರು ಮಂಜರಾಬಾದು ತಾಲ್ಲೂಕಿನಲ್ಲಿ ಬಹಳ ದಿವಸದಾರಭ್ಯ ಕಾಫಿ ಪ್ಲಾಂಟರಾಗಿದ್ದು ಮತ್ತು ಈ ಡಿಸ್ಟ್ರಿಕ್ಟ್ ಬೋರ್ಡ ಮೆಂಬರಾಗಿದ್ದು ಈಗ ಕಾಲವಾದರೆಂಬ ವರ್ತಮಾನ ಕೇಳಿ ಬೋರ್ಡಿನವರು ಬಹಳವಾಗಿ ವಿಷಾದಿಸುವದಲ್ಲದೆ ಈ ಅಂಶವನ್ನು ಕುರಿತು ಮೆ॥ ಸುಂಡೇಕೆರೆ ಶ್ರೀಕಂಠೈಯ್ಯನವರ ಕುಟುಂಬಕ್ಕೆ ತಿಳಿಸಬೇಕೆಂತ ತೀರ್ಮಾನಿಸಲಾಯಿತು.

ಲೋಕಲ್ ಬೋರ್ಡ ರೂಲ್ಸಿನ 17 (1)ನೆ ರೂಲ್ ಅನುಸರಿಸಿ ಸ್ವಲ್ಪದಿವಸದಲ್ಲಿ ಮೆಂಬರುಗಳ ಹೊಸ ಚುನಾವಣೆ ಆಗಬೇಕಾಗಿರುವದರಿಂದ ಸದ್ಯಕ್ಕೆ ಮೆ॥ ಶ್ರೀಕಂಠೈಯ್ಯನವರ ಏವಜಿಗೆ ಬೆಳ್ಳೂರು ಮಂದೇ ಪಟೇಲ ನಂಜೇಗೌಡ ಉರುಫ್ ಪುಟ್ಟೇಗೌಡರನ್ನು (ಮಂಜರಾಬಾದು ತಾಲ್ಲೂಕು ಬೋರ್ಡ ಮೆಂಬರು) 10ನೆ ರೂಲ್ಸ ಪ್ರಕಾರ ಸೊಕರೂರ್ಮಾಡಬೇಕೆಂತ ಗವರ್ನ್‌ಮೆಂಟಿಗೆ ಬರಸಬೇಕಾಗಿ ತೀರ್ಮಾನಿಸಲಾಯಿತು.

XX. ಬರುವ ಡಿಸ್ಟ್ರಿಕ್ಟ್ ಬೋರ್ಡ ಮಿಟಿಂಗನ್ನು ಸ್ಯ 1907ನೆ ಇಸವಿ ಫೆಬ್ರವರಿ ಮಾಹೆ ತಾರೀಖು 18ನೆ ಸೋಮವಾರ ಮಧ್ಯಾನ್ಹಾತ್ಪರ 2 ಘಂಟೆಗೆ ನಡಿಸಬೇಕೆಂತ ತೀರ್ಮಾನಿಸಲಾಯಿತು.

ಪಿ. ಆರ್. ಡಬ್ಲ್ಯೂ. ವೆದರಾಲ್,
ಪ್ರೆಸಿಡೆಂಟ್.

ಬೆಂಗಳೂರು ಸೆಂಟ್ರಲ್ ಜೈಲ್.

ನೋಟಿಸ.

ತಾರೀಖು 13ನೆ ಡಿಸೆಂಬರ 1906.

ನೋಟಿಸ ಮೂಲಕ ತಿಳಿಯಪಡಿಸುವದೇನೆಂದರೆ :—1907ನೆ ಇಸವಿ ಫೆಬ್ರವರಿ ಗುರ್ಮಿಲಾಗಾಯಿತು 1908ನೆ ಇಸವಿ ಜನವರಿ 31ನೆ ತಾರೀಖು ವರಿಗೂ ಜೈಲ್‌ನಲ್ಲಿ ತಯಾರಾಗತಕ್ಕ ಸಾರ್ಮಾಗಳಿಗೆ ಬೇಕಾದಂಥಾ ಎಲ್ಲಾ ರಟಂ ತುಪಟಗಳು ಮತ್ತು ಇತರ ಸಾಮಾನುಗಳನ್ನು ಹಾಜರುಮಾಡಲು ಕಂಟ್ರಾಕ್ಟ ಪಡಿಯಲು ಇಷ್ಟವುಳ್ಳವರಿಂದ ಹಾಜರ್ತಡಲ್ಪಡುವ ಟೆಂಡರುಗಳನ್ನು ಇರುವ ದರಖಾಸ್ತುಗಳನ್ನು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು 1907ನೆ ಇಸವಿ ಜನವರಿ 15ನೆ ತಾರೀಖು ಮಂಗಳವಾರ ದಿವಿ 10 ಘಂಟೆವರಿಗೆ ಅಂಗೀಕರಿಸುವರು.

ಕಂಟ್ರಾಕ್ಟಿನ ತಪಶೀಲುವಾರು ಮೈಸೂರ ಗೆಜೆಟ್ ಡಿಸೆಂಬರ 20ನೆ ತಾರೀಖಿನಲ್ಲಿ ಘಾಯಿಷ್ ಮಾಡಲ್ಪಟ್ಟು ಇರುತ್ತೆ.

ತಾರೀಖು 13ನೆ ಡಿಸೆಂಬರ 1906.

ಇದರಿಂದ ತಿಳಿಯಪಡಿಸುವದೇನೆಂದರೆ :—ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಖೈದುಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಗೆ ಸ್ಯ 1907ನೆ ಇಸವಿ ಫೆಬ್ರವರಿ ಗುರ್ಮಿಲಾಗಾಯಿತು 1908ನೆ ಇಸವಿ ಜನವರಿ 31ನೆ ತಾರೀಖುವರಿಗೆ ಧಾನ್ಯ ಮುಸಾಲೆ ಜಿನಸುಗಳೂ ಮತ್ತು ಇತರ ಅವಶ್ಯಕವಾದ ಪದಾರ್ಥಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಬೆರೆವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರಿಂದ ಸ್ಯ 1907ನೆ ಇಸವಿ ಜನವರಿ ತಾರೀಖು 15ನೆ ಮಂಗಳವಾರ 10 ಘಂಟೆವರಿಗೂ ತೆಗದುಕೊಳ್ಳಲ್ಪಡುವವು.

ಸರಬರಾಯಿ ಆಗತಕ್ಕ ಪದಾರ್ಥಗಳ ತಪಶೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು 1906ನೆ ಇಸವಿ ಡಿಸೆಂಬರ 20ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟವಾಡಿರುತ್ತದೆ.

ತಾರೀಖು 13ನೆ ಡಿಸೆಂಬರ 1906.

ಇದರಿಂದ ತಿಳಿಯಪಡಿಸುವದೇನೆಂದರೆ :—ಸ್ಯ 1907ನೆ ಇಸವಿ ಫೆಬ್ರವರಿ 1ನೆ ತಾರೀಖು ಲಾಗಾಯಿತು 1908ನೆ ಇಸವಿ ಜನವರಿ 31ನೆ ತಾರೀಖುವರಿಗೆ (ಆ ಎರಡು ದಿವಸಗಳೂ ಸೇರಿ) 12 ತಿಂಗಳ ತನಕ ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ ಸವದೆ ಸರಬರಾಯಿ ಮಾಡಲು ಕಂಟ್ರಾಕ್ಟು ತೆಗದುಕೊಳ್ಳುವದಕ್ಕಾಗಿ ಕವರಿನಲ್ಲಿಹಾಕಿ ಮೊಹರುಮಾಡಿದ ದರಖಾಸ್ತುಗಳನ್ನು ಸ್ಯ 1907ನೆ ಇಸವಿ ಜನವರಿ 15ನೆ ತಾರೀಖು ಮಂಗಳವಾರ ಬೆಳ್ಗೆ 10 ಘಂಟೆವರಿಗೆ ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರು ತೆಗದುಕೊಳ್ಳುವರೆಂದು ಇದರಿಂದ ಘಾಯಿಷ್ ಮಾಡಿದೆ.

ಸರಬರಾಯಿ ಆಗಬೇಕಾದ ಸವದೆ ತಪಶೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು ಮೈಸೂರು ಗೆಜೆಟ್ಟಿನಲ್ಲಿ ಪ್ರಕಟ ಮಾಡಿಯಿರುತ್ತದೆ.

ಪಿ. ಎಸ್. ಅಚ್ಚುತರಾವ್,
ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟ್.